1845(2618) ಶ್ರೀ ಕೆ. ರಘುಪತಿ ಭಟ್ (ಉಡುಪಿ): ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಈ ಸಾಲಿನಲ್ಲಿ ಎಷ್ಟು ಸಬ್ಸಿಡಿಯನ್ನು ಬಿಡುಗಡೆಗೊಳಿಸಲಾಗಿದೆ ಹಾಗೂ ಉಳಿದ ಸಬ್ಸಿಡಿಯನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು;

ಆ) ಯಾವ ಯಾವ ದಂಡದ ಮೇಲ ಸಬ್ಸಿಡಿಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬಾಕಿ ಇರುವುದೆಷ್ಟು;

ಇ) ಯಾವ ಕೈಗಾರಿಕೆಗಳಿಗೆ ಇನ್ನೂ ಬಿಡುಗಡೆ ಮಾಡಲು ಬಾಕಿ ಇದೆ;

ಈ) ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಾಗಿದೆ;

ಉ) ಉಡುಪಿ ವಿಧಾನಸಭಾ ಕ್ಷೇತ್ರದ ಮಣಿಪಾಲದಲ್ಲಿರುವ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಲು ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ 2004–05ನೇ ಸಾಲಿಗೆ ಒಟ್ಟು 6586 ಘಟಕಗಳಿಗೆ ರೂ.7843.82 ಲಕ್ಷ ಬಿಡುಗಡೆ ಮಾಡಿದೆ. ಉಳಿದ ಸಹಾಯಧನವನ್ನು 2005–06ನೇ ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಆ) ಕೋಳಿ ಸಾಕಾಣಿಕೆ, ಇಟ್ಟಿಗೆ ಹಾಗೂ ಸ್ವಂತ ಬಂಡವಾಳ ಹೂಡಿದ ಘಟಕಗಳನ್ನು ಹೊರತುಪಡಿಸಿ ದಿನಾಂಕ:31.3.2003ರವರೆಗೂ ಎಲ್ಲಾ ಘಟಕಗಳಿಗೂ ಮಂಜೂರಾದ ಸಹಾಯಧನದಲ್ಲಿ ಶೇ.50 ರಷ್ಟು ಕಾರ್ಯನಿರ್ವಹಿಸುತ್ತಿರುವ ಘಟಕಗಳಿಗೆ ರಾಜ್ಯ ಸಹಾಯಧನ ಬಿಡುಗಡೆ ಮಾಡಲಾಗಿದೆ. ದಿನಾಂಕ:31.12.2004ರವರೆಗೆ 20226 ಘಟಕಗಳಿಗೆ ರೂ.356.05 ಕೋಟಿ ಬಿಡುಗಡೆಯಾಗ ಬೇಕಾಗಿರುತ್ತದೆ.

ಇ) ಸ್ವಂತ ಬಂಡವಾಳ ಹೂಡಿಕೆ ಮಾಡಿ ಸ್ಥಾಪಿಸಿರುವ ಘಟಕಗಳಿಗೆ, ಇಟ್ಟಿಗೆ ತಯಾರು ಮಾಡುವ ಘಟಕಗಳಿಗೆ ಮತ್ತು ಕೋಳಿ ಫಾರಂ ಘಟಕಗಳಿಗೆ ಬಿಡುಗಡೆ ಮಾಡಲು ಬಾಕಿ ಇದೆ.

ಈ) ಸಣ್ಣ ಮತ್ತು ಅತಿ ಸಣ್ಣ ರೋಗಗ್ರಸ್ತ ಕೈಗಾರಿಕೆಗಳಿಗೆ ಪುನಃಶ್ಚೇತನಕ್ಕಾಗಿ ಪ್ರತ್ಯೇಕ ರೋಗಗ್ರಸ್ತ ಪುನಃಶ್ಚೇತನ ಕೈಗಾರಿಕಾ ನೀತಿಯಂತೆ ಸರ್ಕಾರದ ಆದೇಶ ಸಂಖ್ಯೆ ಸಿಐ 167 ಎಸ್.ಪಿ.ಐ 2001 ದಿನಾಂಕ:25.9.2002ರಂತೆ ಪುನಃಶ್ಚೇತನಗೊಂಡ ರೋಗಗ್ರಸ್ತ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತದೆ.

1. ಘಟಕದ ಪುನಃಶ್ಚೇತನ ಯೋಜನಾ ವೆಚ್ಚದ ಶೇ.25ರಷ್ಟು ಹಣವನ್ನು ರೂ.2.50 ಲಕ್ಷಗಳನ್ನು ಮಿತಿಗೊಳಪಟ್ಟು ಬಡ್ಡಿರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.
2. ಕೆ.ಪಿ.ಟಿ.ಸಿ.ಎಲ್.ಗೆ ಬಾಕಿ ಇರುವ ಎನರ್ಜಿ ಬಿಲ್ ಮೊತ್ತವನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು ಮತ್ತು ಬಾಕಿಗೆ ಹಾಕಲಾಗುವ ಬಡ್ಡಿ ದರವನ್ನು ತಿಂಗಳಿಗೆ ಶೇ.ಅರ್ಧ ಕಡಿಮೆ ಮಾಡಲಾಗುವುದು.

3. ಘಟಕವು ಮುಚ್ಚಿರುವ ಅವಧಿಗೆ ಫಿಕ್ಸ್‌ಡ್ ಚಾರ್ಜಸ್/ಡಿಮಾಂಡ್ ಚಾರ್ಜಸ್‌ನ್ನು ಕೆಪಿಟಿಸಿಎಲ್ ಹಾಕುವುದಿಲ್ಲ.

4. ವಾಣಿಜ್ಯ ತೆರಿಗೆ ಇಲಾಖೆಗೆ ಬಾಕಿ ಇರುವ ತೆರಿಗೆ ಮೊತ್ತವನ್ನು ತಿಂಗಳಿಗೆ ಶೇಕಡಾ ಅರ್ಧ ಬಡ್ಡಿದರದೊಂದಿಗೆ ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು.

5. ಕೈಗಾರಿಕಾ ಮುಚ್ಚಿರುವ ಅವಧಿಗೆ ಕೆಪಿಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆ ಬಡ್ಡಿಯನ್ನು ಲೆಕ್ಕಾಚಾರ ಮಾಡುವುದಿಲ್ಲ.

6. ಕೈಗಾರಿಕೆಗಳು ಭವಿಷ್ಯದಲ್ಲಿ ನೀಡಬೇಕಾಗಿರುವ ತೆರಿಗೆಯನ್ನು ಯಾವುದೇ ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲಾಗುವುದು.

ಊ) ಉಡುಪಿ ವಿಧಾನಸಭಾ ಕ್ಷೇತ್ರದ ಮಣಿಪಾಲದಲ್ಲಿರುವ ಕೈಗಾರಿಕಾ ವಸಾಹತುವಿನಲ್ಲಿರುವ ರಸ್ತೆಗಳ ಡಾಂಬರೀಕರಣ, ಚರಂಡಿ, ವಿದ್ಯುದ್ದೀಪಗಳು, ನೀರಿನ ವ್ಯವಸ್ಥೆ ಮುಂತಾದವುಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ರೂ.15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

1846(2617) ಶ್ರೀ ರಘುಪತಿ ಭಟ್ ಕೆ.(ಉಡುಪಿ):ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ಯಾವ ಕಾರ್ಯಯೋಜನೆಯನ್ನು ಸರ್ಕಾರವು ಹಾಕಿಕೊಂಡಿದೆ;

ಆ) ಉಡುಪಿ ಜಿಲ್ಲೆಯಲ್ಲಿ ರೇಷ್ಮೆ ಅಭಿವೃದ್ಧಿ ಬಗ್ಗೆ ಯಾವ ಯೋಜನೆಯನ್ನು ಕಾರ್ಯಗತ ಗೊಳಿಸಲಾಗುವುದು.

ಇ) ಉಡುಪಿ ಜಿಲ್ಲೆಯಲ್ಲಿ ರೇಷ್ಮೆ ಬೆಳೆಗೆ ಪ್ರೋತ್ಸಾಹ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಯಾವಕ್ರಮ ಕೈಗೊಂಡಿದೆ?

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು):

ಅ) ರೇಷ್ಮೆ ಬೆಳೆಗಾರರ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಜಿಲ್ಲಾ ತಾಲ್ಲೂಕು ಪಂಚಾಯ್ತಿ ಯೋಜನೆ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಇದಲ್ಲದೆ ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ 246, ತಾಂತ್ರಿಕ ಸೇವಾ ಕೇಂದ್ರಗಳು, 17 ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳು, 81 ಬಿತ್ತನೆ ಕೋಠಿಗಳು, 66 ಗೂಡು ಮಾರುಕಟ್ಟೆಗಳು, 96 ರೇಷ್ಮೆ ಕೃಷಿಕ್ಷೇತ್ರಗಳು ಮತ್ತು 6 ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಮುಂದುವರೆಸಲಾಗುತ್ತಿದೆ.

ಆ) ರೇಷ್ಮೆ ಬೆಳೆಗಾರರ ಅಭಿವೃದ್ಧಿಗೆ ಸರ್ಕಾರವು ಕೇಂದ್ರ ರೇಷ್ಮೆ ಮಂಡಳಿ ಸಹಯೋಗ ದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಕೆಳಕಂಡ ಕಾರ್ಯಕ್ರಮ ರೇಷ್ಮೆ ಬೆಳೆಗಾರರಲ್ಲಿ ಜನಪ್ರಿಯತೆ ಗಳಿಸಿದ್ದು ಇವುಗಳನ್ನು ಮುಂದುವರೆಸಲಾಗುತ್ತಿದೆ.